SAMYUKTHA KARNATAKA BANGALORE
DATED: 20th February 2000



'ಅರ್ಥ್' ಕಟ್ಟಡದ ಒಂದು ನೋಟ




# ಅರ್ಥ್: ವಿಶಿಷ್ಟ ಆರೋಗ್ಯ ಕೇಂದ್ರ

ಸಂಯುಕ್ತ ಕರ್ನಾಟಕ ದಿನಪತ್ರಿಕೆ 20/02/2000

**ಮೂ**ರು ತಿಂಗಳು ಸಾಂಪ್ರದಾಯಿಕವಾಗಿ ಬಾಣಂತನ ಮಾಡಿ ತಾಯಿ, ಮಗುವನ್ನು ಎಲ್ಲ ವಿಧದಲ್ಲಿ ಆರೋಗ್ಯವಂತರನ್ನಾಗಿ ಪೋಷಿಸಿ ಆತ್ಮೀಯತೆಯ ಬೀಳ್ಕೊಡುಗೆ ನೀಡುವ ತವರು ಮನೆ 'ಆತ್ರೇಯ'.

ಇದೊಂದು ವಿಶಿಷ್ಟ ಸೇವಾ ಯೋಜನೆಗಳನ್ನು ಹೊಂದಿದ ಉತ್ಸಾಹೀ ತರುಣ ವೈದ್ಯರ ತಂಡವಿರುವ ಆರೋಗ್ಯ ಕೇಂದ್ರ. ನಗರ ಪರಿಸರದಲ್ಲಿ, ಉದ್ವೇಗಭರಿತ ಬದುಕಿನ ಹತ್ತಾರು ಸಮಸ್ಯೆಗಳಿಗೂ ಪರಿಹಾರ ನೀಡಲು ಕುತೂಹಲಕಾರಿ ಯೋಜನೆಗಳನ್ನು ಹೊಂದಿರುವ ಸೇವಾ ಕೇಂದ್ರವೂ ಹೌದು.

**ವೃದ್ಧಾಪ್ಯದ, ಅನಾರೋಗ್ಯದ ಅಸಹಾಯಕತೆ ಈ ಎಲ್ಲ ಸಮಸ್ಯೆಗಳಿಂದ ಕಂಗಾಲಾಗುವ ಮಹಿಳೆಯರಿಗೆ 'ಆತ್ರೇಯ' ಒಂದು ವರದಾನವಾಗಿದೆ.**

**ನಂ. ನಾಗಲಕ್ಷ್ಮಿ**

ಚಿಕ್ಕ ಕುಟುಂಬವಾದರೂ ಬಿಡುವಿರದ, ಸಂಸಾರದ ನೊಗ ಹೊತ್ತು ಮನೆಯ ಒಳಗೂ, ಹೊರಗೂ ದುಡಿಯುವ ಹೊಣೆ, ಮನೆಯಲ್ಲಿ ಹೊಣೆಗಾರಿಕೆ ಹೊತ್ತು ಮಾರ್ಗದರ್ಶನ ನೀಡುವ ಹಿರಿಯರ ಅನುಪಸ್ಥಿತಿ, ನೆರವಿನ ಅನಿವಾರ್ಯತೆ ಕೆಲವು ಸಂದಗಳಲ್ಲಿ ಹಿರಿಯರಿದ್ದರೂ ಸೂಕ್ತ ನೆರವು ನೀಡಲಾಗದ ಪರಿಸ್ಥಿತಿ ಅಥವಾ ಅವರನ್ನು ಕಾಡುವ ವೃದ್ಧಾಪ್ಯದ, ಅನಾರೋಗ್ಯದ ಅಸಹಾಯಕತೆ ಈ ಎಲ್ಲ ಸಮಸ್ಯೆಗಳಿಂದ ಕಂಗಾಲಾಗುವ ಮಹಿಳೆಯರಿಗೆ 'ಆತ್ರೇಯ' ಒಂದು ವರದಾನವಾಗಿದೆ.

ತಾಯಿಯಾಗಬಯಸುವ ಮಹಿಳೆಗೆ 15 ತಿಂಗಳುವರೆಗೆ ತವರು ಮನೆಯಂತೆ ಕಾಳಜಿ ವಹಿಸುತ್ತದೆ ಈ ಕೇಂದ್ರ. ಆರೋಗ್ಯವಂತ ತಾಯಿ-ಮಗು ಕೇಂದ್ರದಿಂದ ಹೊರಬರಲು ತಕ್ಕ ವ್ಯವಸ್ಥೆಗಾಗಿ ಅಗತ್ಯವಿರುವ ಯೋಜನೆಗಳು ಗರ್ಭಧಾರಣೆಗೆ ಮೂರು ತಿಂಗಳ ಮೊದಲೇ ರೂಪುಗೊಳ್ಳತೊಡಗುತ್ತವೆ. ನಿರ್ದಿಷ್ಟ ಮನೋಭಾವದ (ಕಲಾವಿದನೋ, ಕ್ರೀಡಾಳುವೋ ಇತ್ಯಾದಿ) ಮುಖಕಾಂತಿಯ ಮಗುವಿಗೆ ಜನ್ಮ ನೀಡಲು ಬೇಕಾದ ಪೂರ್ವ ಭಾವಿ ಚಿಕಿತ್ಸೆಗಳೇ ಇವು. ಹುಟ್ಟುವ ಮಗುವಿಗೆ ಯಾವುದೇ ರೋಗ ತಟ್ಟದಂತೆ ಮುಂಜಾಗ್ರತಾ ಕ್ರಮವಾಗಿ ನಿಗದಿಪಡಿಸಿದ ಅಂದರೆ ಆಯುರ್ವೇದದಲ್ಲಿ ತಿಳಿಸಿದಂತಹ ಆಹಾರ ಸೇವನೆ, ಮಾನಸಿಕ ಆರೋಗ್ಯ, ಉತ್ತಮ ರೀತಿಯ ಪರಿಸರ ನಿರ್ಮಾಣ, ಹೆರಿಗೆಯ ನಂತರದಲ್ಲಿ ತಾಯಿ ಮಗುವಿಗೆ 100ಕ್ಕೆ 100 ಭಾಗ ಆಯುರ್ವೇದ ಜೀವನ ವ್ಯವಸ್ಥೆ, ಸಾಂಪ್ರದಾಯಿಕ ಬಾಣಂತನ ಇಲ್ಲಿ ಮಾಡಲಾಗುತ್ತದೆ. ಅಂದರೆ ಕ್ರಮ ತಪ್ಪದ ಅಭ್ಯಂಜನ ಸ್ನಾನ, ಧೂಪ ಹಾಕಿ ತಲೆಕೂದಲು ಒಣಗಿಸುವುದು, ಮೈಗೆಲ್ಲ ಬಜೆ- ಅರಿಶಿನ ಹಚ್ಚುವುದು, ಆಹಾರದಲ್ಲಿ ಧಾರಾಳವಾಗಿ ತುಪ್ಪ, ಮೆಣಸು, ಬೆಳ್ಳುಳ್ಳಿಗಳ ಬಳಕೆ, ಅಂಟುಉಂಡೆಯನ್ನು ಕಡ್ಡಾಯವಾಗಿ ತಿನ್ನಿಸುವುದು, ಕಂಡಾಬಾರದ ಕ್ರಮಗಳೆಂದು ಮೂಗು ಮುರಿಯುವ ಆಧುನಿಕರೆನಿಸಿಕೊಂಡವರಿಗೆ ತಮ್ಮ ಚಿಕಿತ್ಸಾ ವಿಧಾನದಲ್ಲಿ ಹುದುಗಿರುವ ವೈಜ್ಞಾನಿಕ ಅಂಶದ ಅರಿವು ಮೂಡಿಸಿ ಎಲ್ಲದರ ಕ್ರಮಬದ್ಧ ಅನುಸರಣೆ ಮಾಡಿಸುವುದು. ಹೀಗೆ ಮೂರು ತಿಂಗಳು ಎಲ್ಲದರ ಪಾಲನೆ ಪರಿಣಾಮ, ಸದೃಢಳಾದ ತಾಯಿ ಸಂಪೂರ್ಣ ಆರೋಗ್ಯವಂತ ಮಗುವಿನೊಂದಿಗೆ 'ಆತ್ರೇಯ'ಕ್ಕೆ ಕೃತಜ್ಞತೆ ಹೇಳಿ ಹೊರಡುತ್ತಾಳೆ.

ಆಯುರ್ವೇದ ಪದ್ಧತಿಯ ಚಿಕಿತ್ಸಾಲಯಗಳು, ಸೇವಾ ಕೇಂದ್ರಗಳು ದೇಶದ ಎಲ್ಲೆಡೆ ತಲೆಯೆತ್ತುತ್ತಿವೆ. ಶಿಸ್ತಿನ ಜೀವನ ಕ್ರಮವೇ ಆಯುರ್ವೇದದ ಅರ್ಥವೆಂದು ಬಿಂಬಿಸುವ ಮಹತ್ವದ ಗುರಿಯನ್ನು ಹೊಂದಿರುವುದೇ 'ಆತ್ರೇಯ' ಅಥವಾ 'ಅರ್ಥ್'. ಬೆಂಗಳೂರಿನ ಇಂದಿರಾನಗರದ ಎಚ್.ಎ.ಎಲ್. ಎರಡನೇ ಹಂತದಲ್ಲಿ 1999ರ ಅಗಸ್ಟ್ 24 ರಂದು ಸಾರ್ವಜನಿಕರಿಗೆ ತೆರೆದುಕೊಂಡ 'ಅರ್ಥ್' ಹೊರನೋಟಕ್ಕೆ ಒಂದು ಸಾಧಾರಣ ಕಟ್ಟಡ. ಒಳಗೆ ಪ್ರವೇಶಿಸಿದ ನಂತರವೇ ಅದೊಂದು ಸುಸಜ್ಜಿತ ವಿಶಿಷ್ಟ ಚಿಕಿತ್ಸಾ ಕೇಂದ್ರವೂ, ಸೇವಾ ಕೇಂದ್ರವೂ ಆಗಿರುವುದು ಅರಿವಾಗುತ್ತದೆ. ಬಾಣಂತನ ಮಾಡಿಕೊಡುವ ವಿಶಿಷ್ಟ ಹಾಗೂ ಪ್ರಸ್ತುತ ಅತ್ಯಗತ್ಯದ ಸೌಲಭ್ಯ ಹೊಂದಿರುವುದರೊಂದಿಗೆ ಮತ್ತೂ ಕೆಲವು ಗಮನಸೆಳೆಯುವ ಯೋಜನೆಗಳನ್ನು ಕೇಂದ್ರ ಹೊಂದಿದೆ.



ಶಿರೋಧಾರಾ ಚಿಕಿತ್ಸೆ

## ಮಹತ್ವಪೂರ್ಣ ಯೋಜನೆಗಳು

ಇತ್ತೀಚಿನ ದಿನಗಳಲ್ಲಿ ಸಾಫ್ಟ್‌ವೇರ್ 'ಉದ್ಯಮ ಅತ್ಯಂತ ಜನಪ್ರಿಯವಾಗಿರುವ ಕ್ಷೇತ್ರ. ಇತರ ಉದ್ಯೋಗಿಗಳಂತೆ ಇಲ್ಲಿನ ಉದ್ಯೋಗಿಗಳ ದಿನಚರಿಯಿರುವುದಿಲ್ಲ. ಊಟ, ನಿದ್ರೆ, ದುಡಿಮೆ, ಕ್ರಮಬದ್ಧವಲ್ಲದ ಜೀವನ; ಹಲವು ಗಂಟೆಗಳ ಕಾಲ ಕಂಪ್ಯೂಟರ್‌ಗಳ ಮುಂದೆ ಕುಳಿತು ರಾತ್ರಿ ಬಹು ಹೊತ್ತಿನವರೆಗೆ ಕೆಲಸ ಮಾಡುವ ಪರಿಸ್ಥಿತಿ; ಹಾಗಾಗಿ ಹಲವಾರು ದೈಹಿಕ ತೊಂದರೆಗಳಲ್ಲದೆ, ಮನಸ್ಸಿಗೆ ಒತ್ತಡ ಬಹಳವಾಗಿ ಅದೂ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿರುವ ಸಂಗತಿ ಎಲ್ಲರಿಗೂ ತಿಳಿದದ್ದೇ. ಕಣ್ಣು ಉರಿ, ತಲೆನೋವು, ಬೆನ್ನುನೋವು, ಕಂಪ್ಯೂಟರ್ ಸ್ವಿಚ್‌ಗಳ ಸತತ ಬಳಕೆಯಿಂದ ಕೈಗಳ ರಿಸ್ಟ್ ನೋಯುವುದು ಈ ಎಲ್ಲ ತೊಡಕುಗಳು ಸಾಮಾನ್ಯ. ಇಂತಹವರಿಗೆ 6 ತಿಂಗಳಿಗೆ ಒಮ್ಮೆ ಒಂದು ವಾರದ ಚಿಕಿತ್ಸೆ ನೀಡಿ ಮತ್ತೆ ಅವರು ಎಂದಿನ ಉತ್ಸಾಹ, ದೇಹದಲ್ಲಿ ಲವಲವಿಕೆಯ ಚೈತನ್ಯ ಹೊಂದುವಂತೆ ಮಾಡುವುದು. ಇವರ ಯೋಜನೆಗಳಲ್ಲೊಂದು. ಈಗಾಗಲೇ ಕಂಪೆನಿಯೊಂದು ಇವರೊಂದಿಗೆ ಒಪ್ಪಂದ ಮಾಡಿಕೊಂಡಿದ್ದು ತನ್ನ ಕೆಲವು ಎಂಜಿನಿಯರ್‌ಗಳನ್ನು ಚಿಕಿತ್ಸೆಗೆ ಕಳುಹಿಸಲು ಮುಂದೆ ಬಂದಿರುವುದು ಈ ಯೋಜನೆಗೆ ಸಿಕ್ಕಿರುವ ಸ್ವಾಗತಕ್ಕೆ ನಿದರ್ಶನ.

'ಅರ್ಥ್' ಸಾಧಾರಣ ಕಟ್ಟಡದಂತೆ ಕಂಡರೂ ಒಳಗೆ ಹಲವು ಸುಸಜ್ಜಿತ ವಿಭಾಗಗಳನ್ನು ಹೊಂದಿದೆ. 'ಆತ್ರೇಯ ರಿಸಾರ್ಟ್ಸ್ ಫಾರ್ ಟ್ರೆಡಿಷನಲ್ ಹೀಲಿಂಗ್' ಎಂಬುದರ ಸಂಕ್ಷಿಪ್ತ ರೂಪವೇ 'ಅರ್ಥ್'. ಒಳಗೆ ಪ್ರವೇಶಿಸುತ್ತಿದ್ದಂತೆಯೇ

(ಐದನೇ ಪುಟಕ್ಕೆ)